# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಬಳ್ಳಾರಿ ಜಿಲ್ಲೆ, ಕೂಡ್ಲಿಗಿ ತಾಲ್ಲೂಕಿನ ಹ್ಯಾಳ್ಯಾ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಶ್ರೀಮತಿ ಡಿ.ಕೊಟ್ರಮ್ಮ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 43(ಎ) ಮತ್ತು 48(4) ರನ್ವಯ ಕ್ರಮ ಜರುಗಿಸುವ ಬಗ್ಗೆ.

.........................................

**ಓದಲಾಗಿದೆ:**

1) ವಿಚಾರಣಾಧಿಕಾರಿಗಳು ಹಾಗೂ ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ ಇವರ ಪತ್ರ ಸಂಖ್ಯೆ:ಕಂ/ಪ್ರಾಆಕ/ಜಿಪಂ/07/2019-20, ದಿನಾಂಕ: 01.07.2019
2) ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ ಇವರ ವಿಚಾರಣಾ ನೋಟಿಸ್‌ಗಳ ದಿನಾಂಕ:20.04.2019,
3) ಶ್ರೀಮತಿ ಡಿ.ಕೊಟ್ರಮ್ಮ, ಹ್ಯಾಳ್ಯಾ ಗ್ರಾಮ ಪಂಚಾಯಿತಿ, ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರು ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ:20.05.2019.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ(1)ರಲ್ಲಿ ಶ್ರೀಮತಿ ಡಿ.ಕೊಟ್ರಮ್ಮ, ಅಧ್ಯಕ್ಷರು, ಹ್ಯಾಳ್ಯಾ ಗ್ರಾಮ ಪಂಚಾಯಿತಿ, ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರು ಹ್ಯಾಳ್ಯಾ ಗ್ರಾಮ ಪಂಚಾಯಿತಿಯಲ್ಲಿ ವಿವಿಧ ಯೋಜನೆಯಡಿ ಹಣ ದುರ್ಬಳಕೆ ಮತ್ತು ಕರ್ತವ್ಯಲೋಪ ಎಸಗಿದ್ದಾರೆ ಎನ್ನಲಾದ ದೂರಿನ ಕುರಿತು ವಿಚಾರಣೆ ನಡೆಸಿ ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ ಮೇಲ್ನೋಟಕ್ಕೆ ಕಂಡುಬರುತ್ತದೆಂದು ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಆಧಿನಿಯಮ 43(ಎ) ಮತ್ತು 48(4)ರನ್ವಯ ಕ್ರಮ ಜರುಗಿಸುವ ಕುರಿತು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 43-ಎ(iii) ಮತ್ತು 48(4) ರಡಿ ಕ್ರಮವಹಿಸುವ ಪೂರ್ವದಲ್ಲಿ ನಿಯಮಾನುಸಾರ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3) ರಲ್ಲಿ ಸದರಿಯವರು ಕಾರಣ ಕೇಳುವ ನೋಟೀಸಿಗೆ ಈ ಕೆಳಕಂಡಂತೆ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.

1) ತಾವು ಜಿಲ್ಲಾ ಪಂಚಾಯಿತಿಯ ಪೂರ್ವಾನುಮೋದನೆಯನ್ನು ಪಡೆಯದೇ ಗ್ರಾಮ ಪಂಚಾಯಿತಿಯ ನೌಕರರನ್ನು ನೇಮಕ ಮಾಡಿಕೊಂಡು ನಿಯಮಬಾಹಿರವಾಗಿ ವೇತನ ಪಾವತಿಸಿರುವುದಿಲ್ಲ. ಇದಕ್ಕೆ ಸಂಬಂಧಿಸಿದಂತೆ ಈ ಹಿಂದೆ ಗ್ರಾಮ ಪಂಚಾಯಿತಿ ಅಧ್ಯಕ್ಷರುಗಳು ಹಿಂದಿನ ಆಡಳಿತ ಮಂಡಳಿಯವರು ಠರಾವು ಮಾಡುವುದರ ಮೂಲಕ ತೆಗೆದುಕೊಂಡಿರುತ್ತಾರೆ. ಉಳಿದಂತೆ ಶ್ರೀ ನಿರಂಜನಮೂರ್ತಿ, ಡಾಟಾ ಎಂಟ್ರಿ ಆಪರೇಟರ್ ಮತ್ತು ಶ್ರೀ ಹನುಮಂತಪ್ಪ, ನೀರಗಂಟಿ, ಶ್ರೀಮತಿ ಸವಿತಾ ಜಿ. ಕರವಸೂಲಿಗಾರರು ಇವರುಗಳನ್ನು ಆಯ್ಕೆ ಮಾಡಿಕೊಳ್ಳುವ ಮೊದಲು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಜಿಲ್ಲಾ ಪಂಚಾಯಿತಿ ಅನುಮೋದನೆ ಪಡೆದಿರುತ್ತೇನೆಂದು ಸುಳ್ಳು ಮಾಹಿತಿಯನ್ನು ನೀಡಿ ಅವಿದ್ಯಾವಂತಳಾದ ತಮಗೆ ಮೋಸ ಮಾಡಿರುತ್ತಾರೆ. ಇದರಲ್ಲಿ ಅಧ್ಯಕ್ಷರಾದ ತಮ್ಮ ಯಾವುದೇ ಆರ್ಥಿಕ ದುರ್ನಡತೆ ಇರುವುದಿಲ್ಲ. ಇದಕ್ಕೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಸರಿಯಾದ ಮಾಹಿತಿ ನೀಡದೇ ಇರುವುದರಿಂದ ಸದರಿಯವರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕೇ ಅಥವಾ ಬೇಡವೇ ಎಂಬ ನಿಯಮಗಳ ಬಗ್ಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ತಮಗೆ ಯಾವುದೇ ಮಾಹಿತಿ ನೀಡಿರುವುದಿಲ್ಲವೆಂದು ತಾವು ಯಾವುದೇ ಅಧಿಕಾರ ದುರುಪಯೋಗ ಅಥವಾ ದುರ್ನಡತೆ ಮತ್ತು ಕರ್ತವ್ಯಲೋಪ ಎಸಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

2) 13ನೇ ಹಣಕಾಸು ಯೋಜನೆಯಡಿ ಕ್ರಿಯಾ ಯೋಜನೆಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯದೇ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿರುವುದು ಎಂಬ ಆರೋಪಕ್ಕೆ ತಾನು ಅಧ್ಯಕ್ಷಳಾಗಿ ಅಧಿಕಾರ ವಹಿಸಿಕೊಂಡ ಮೇಲೆ 13ನೇ ಹಣಕಾಸು ಯೋಜನೆಯಡಿ ಹಣ ಬಿಡುಗಡೆಯಾಗಿರುವುದಿಲ್ಲ. 2014-15ನೇ ಸಾಲಿಗೆ ಹಣಕಾಸು ಯೋಜನೆಯಡಿ ರೂ.11,14,000/- ಗಳಿಗೆ ಕ್ರಿಯಾ ಯೋಜನೆಯನ್ನು ತಯಾರಿಸಿ ಸದರಿ ಕ್ರಿಯಾ ಯೋಜನೆಯಲ್ಲಿ 1 ರಿಂದ 19 ಕಾಮಗಾರಿಗಳಿಗೆ ಸಕ್ಷಮ ಪ್ರಾಧಿಕಾರದಿಂದ ಈ ಹಿಂದಿನ ಆಡಳಿತ ಮಂಡಳಿಯವರು ಅನುಮೋದನೆ ಪಡೆದಿರುತ್ತಾರೆ. ದೂರುದಾರರು ಆರೋಪಿಸಿರುವ ಕಾಮಗಾರಿಗಳ ವಿವರದ 1 ರಿಂದ 3ನೇ ಕಾಮಗಾರಿಗಳು ತಾವು ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳುವ ಮೊದಲೇ ಆ ಮೂರು ಕಾಮಗಾರಿಗಳಿಗೆ ಬಿಲ್ಲನ್ನು ಪಡೆದಿರುತ್ತಾರೆಂದು ಇದಕ್ಕೆ ಹಿಂದಿನ ಅಧ್ಯಕ್ಷರು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹೊಣೆಗಾರರಾಗಿರುತ್ತಾರೆಂದು, ಉಳಿದ ಎರಡು ಕಾಮಗಾರಿಗಳು ಸಕ್ಷಮ ಪ್ರಾಧಿಕಾರದಿಂದ ಅನುಮೋದಿತ ಕ್ರಿಯಾ ಯೋಜನೆಯ ಕ್ರ.ಸಂ.4 ಮತ್ತು 5ರ ಶೇ.25ರ ಕಾಮಗಾರಿಗಳಲ್ಲಿ ನಮೂದಿಸಿ ಅನುಮೋದನೆ ಪಡೆದಿದ್ದು, ನಿಯಮದಂತೆ ಕಾಮಗಾರಿಗಳನ್ನು ನಿರ್ವಹಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

3) ಸದಸ್ಯರ ಸಭಾ ಭತ್ಯೆಯನ್ನು ಸಂಬಂಧಿಸಿದ ಸದಸ್ಯರ ಖಾತೆಗೆ Account Payee Chequeಗಳ ಮೂಲಕ ಪಾವತಿಸಲಾಗಿದೆ. ಗ್ರಾಮ ಪಂಚಾಯಿತಿಯ ಸಿಬ್ಬಂದಿಗಳ ಹೆಸರಿಗೆ ಪಾವತಿಸಿರುವುದು ಎಂದು ಆರೋಪಿಸಿರುವುದರ ಬಗ್ಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಬಳಿ ದಾಖಲೆ ಇದ್ದು, ಪಂಚಾಯಿತಿ ಸದಸ್ಯರುಗಳಿಗೆ ಚೆಕ್‌ಗಳ ಮೂಲಕವೇ ಸಭಾ ಭತ್ಯೆಯನ್ನು ನೀಡಿದ್ದು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ಈ ಬಗ್ಗೆ ದಾಖಲಾತಿಗಳನ್ನು ನೀಡಬೇಕಾಗಿದ್ದು, ತಮ್ಮ ಬಳಿ ದಾಖಲೆಗಳು ಲಭ್ಯವಿಲ್ಲದ ಕಾರಣ ಜಿಲ್ಲಾ ಪಂಚಾಯಿತಿ ಅಧಿಕಾರಿಗಳಿಗೆ ಮನವಿ ನೀಡುವಾಗ ದಾಖಲೆಗಳನ್ನು ಸಲ್ಲಿಸಿರುವುದಿಲ್ಲವಾದ್ದರಿಂದ ತಾವು ಯಾವುದೇ ಆರ್ಥಿಕ ದುರ್ನಡತೆ ಹಾಗೂ ಕರ್ತವ್ಯ ಲೋಪ ಎಸಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

4) ಸಾಮಗ್ರಿ ಸರಬರಾಜು ಮಾಡಿದವರ ಹೆಸರಿಗೆ ಪಾವತಿಸದೇ ಅನ್ಯರ ಹೆಸರಿಗೆ ಪಾವತಿಸಿರುವುದು ಎಂಬ ಆರೋಪದ ಬಗ್ಗೆ ತುರ್ತಾಗಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದ್ದರಿಂದ ಶ್ರೀ ಸಂದೀಪ ರವರು ಕೊಟ್ಟೂರೇಶ್ವರ ಎಲೆಕ್ಟ್ರಿಕಲ್ಸ್ ವರ್ಕ್ಸ್‌ನ ಮಾಲೀಕರೆಂದು ಅವರಿಗೆ ಮತ್ತು ವಿಶಾಲಾಕ್ಷಿ ಇವರು ಜನಶ್ರೀ ಟ್ರೇಡರ್ಸ್ ಮಾಲೀಕರೆಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ತಮಗೆ ತಿಳಿಸಿದ್ದು, ಹ್ಯಾಳ್ಯಾ ಗ್ರಾಮದಲ್ಲಿ ಬಸವೇಶ್ವರ ರಥೋತ್ಸವ ಇರುವುದರಿಂದ ಚೌಟಗಿ ಕೊಟ್ರೇಶ ಇವರಿಂದ ತುರ್ತಾಗಿ ನಗದು ನೀಡಿ ಸಾಮಾಗ್ರಿಗಳನ್ನು ಖರೀದಿಸಿದ್ದೇವೆಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ತಮಗೆ ಮಾಹಿತಿ ನೀಡಿ ಚೆಕ್‌ಗೆ ಸಹಿ ಪಡೆದಿರುತ್ತಾರೆ. ಇದರಲ್ಲಿ ತಮ್ಮ ಯಾವುದೇ ಸ್ವ-ಹಿತಾಸಕ್ತಿ ಮತ್ತು ತಾವು ಯಾವುದೇ ಆರ್ಥಿಕ ದುರ್ನಡತೆ ಎಸಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

5) ಪತ್ರಿಕೆಗಳಿಗೆ ಸಕ್ಷಮ ಪ್ರಾಧಿಕಾರದ ಮಂಜೂರಾತಿ ಇಲ್ಲದೇ ಚಂದಾ ವಸೂಲಿ ಮತ್ತು ಜಾಹೀರಾತು ವೆಚ್ಚ ಎಂದು ಪಾವತಿಸಿರುವುದು ಎಂಬ ಆರೋಪದ ಬಗ್ಗೆ ಹ್ಯಾಳ್ಯಾ ಗ್ರಾಮ ಪಂಚಾಯಿತಿ ಪಕ್ಕದಲ್ಲಿ ಐತಿಹಾಸಿಕ ಕೊಟ್ಟೂರೇಶ್ವರ ಸ್ವಾಮಿ ರಥೋತ್ಸವವು ಕೊಟ್ಟೂರಿನಲ್ಲಿ ಇರುವುದರಿಂದ ಪ್ರಚಾರಕ್ಕಾಗಿ ಜಾಹೀರಾತು ಮಾಡುವ ವಿಚಾರವಾಗಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದಿರುತ್ತೇನೆಂದು ತಮ್ಮ ಸಹಿ ಪಡೆದಿರುತ್ತಾರೆ. ಆದಕಾರಣ ತಾವು ಈ ಆರೋಪಕ್ಕೆ ಸಂಬಂಧಿಸಿದಂತೆ ಯಾವುದೇ ಆರ್ಥಿಕ ದುರ್ನಡತೆ ಮತ್ತು ಕರ್ತವ್ಯಲೋಪ ಎಸಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

6) ರೂ.7,03,998/-ಗಳಿಗೆ ಯಾವುದೇ ವೋಚರ್‌ಗಳನ್ನು ನಿರ್ವಹಿಸದೇ ಹಣ ಪಾವತಿಸಿರುವುದು ಎಂಬ ಆರೋಪಕ್ಕೆ ಸಂಬಂಧಿಸಿದಂತೆ ತಾವು ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿ ದಿನಾಂಕ: 29.06.2015ರಂದು ಅಧಿಕಾರ ವಹಿಸಿಕೊಂಡಿದ್ದು, ಜಿಲ್ಲಾ ಪಂಚಾಯಿತಿಯ ಲೆಕ್ಕಾಧಿಕಾರಿಗಳು ಜಾರಿಮಾಡಿದ ಕಾರಣ ಕೇಳುವ ನೋಟೀಸ್‌ನಲ್ಲಿ 12 ಮತ್ತು 13ನೇ ಪುಟದ ಕ್ರ.ಸಂ.1 ರಿಂದ 49ರಲ್ಲಿನ ವಿಷಯಗಳಿಗೆ ಸಂಬಂಧಪಟ್ಟಂತೆ 3ರಿಂದ 20, 30, 39ರಿಂದ 45 ಕ್ರಮ ಸಂಖ್ಯೆಯ ಹಣ ಬಟವಾಡೆಯಾದ ಬಗ್ಗೆ ಈ ಹಿಂದಿನ ಅಧ್ಯಕ್ಷರು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಬಾಧ್ಯರು. ಇದರ ಅಂದಾಜು ಮೊತ್ತ ರೂ.4,95,087/-ಗಳಾಗಿದ್ದು, ತಮ್ಮ ಅಧಿಕಾರಾವಧಿಯಲ್ಲಿ ರೂ.2,08,911/-ಗಳಿಗೆ ಮಾತ್ರ ವೋಚರ್ ಮತ್ತು ಬಿಲ್ಲುಗಳಿಗೆ ಸಂಬಂಧಿಸಿದಂತೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಬಳಿ ದಾಖಲೆಗಳಿರುತ್ತದೆಂದು ತಿಳಿಸಿರುತ್ತಾರೆ.

7) 2016-17ನೇ ಸಾಲಿಗೆ 14ನೇ ಹಣಕಾಸು ಯೋಜನೆಯಡಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ, 1999 ಅನ್ನು ಉಲ್ಲಂಘಿಸಿ ರೂ.8,24,873/-ಗಳ ಮೊತ್ತದ ಕುಡಿಯುವ ನೀರಿನ ಸಾಮಗ್ರಿಗಳ ಖರೀದಿಯಲ್ಲಿ ನಿಯಮಗಳನ್ನು ಉಲ್ಲಂಘಿಸಿರುವ ಆರೋಪಕ್ಕೆ ಸಂಬಂಧಿಸಿದಂತೆ 14ನೇ ಹಣಕಾಸು ಯೋಜನೆಯ 2016-17ನೇ ಸಾಲಿನ ಕ್ರಿಯಾ ಯೋಜನೆಯನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದಿದ್ದು, ಕಾನೂನು ಬದ್ಧವಾಗಿ ಕುಡಿಯುವ ನೀರಿನ ಸಾಮಗ್ರಿ ಮತ್ತು ಮೋಟರ್ ದುರಸ್ತಿಗಾಗಿ ವ್ಯಯ ಮಾಡಲಾಗಿದೆ ಮತ್ತು ಏಕಕಾಲದಲ್ಲಿ ನಿಯಮ ಮೀರಿ ನಿಗದಿತ ಮೊತ್ತಕ್ಕಿಂತ ಹೆಚ್ಚಿನ ಬೆಲೆಯ ಸಾಮಗ್ರಿಗಳನ್ನು ಒಂದೇ ಕೆಲಸಕ್ಕೆ ಖರೀದಿಸಿರುವುದಿಲ್ಲ. ಅದರ ಬಗ್ಗೆ 2015-16, 2016-17ರ ಅವಧಿಯಲ್ಲಿ ಸಾಮಗ್ರಿಗಳನ್ನು ಖರೀದಿಸಿದ್ದು, ಕೆ.ಟಿ.ಪಿ.ಪಿ.ಯ ಯಾವುದೇ ನಿಯಮಗಳನ್ನು ಉಲ್ಲಂಘಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ.

8) ಶಾಸನಬದ್ಧ ತೆರಿಗೆಯನ್ನು ಜಮಾ ಮಾಡಿರುವುದಿಲ್ಲವೆಂಬ ಆರೋಪಕ್ಕೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಬಟವಾಡೆ ಅಧಿಕಾರಿಯಾಗಿದ್ದು, ಲೆಕ್ಕ ಪತ್ರಗಳು ಅವರ ಬಳಿ ಇದ್ದು, ಅವರೇ ಲೆಕ್ಕಾಧಿಕಾರಿಗಳಾಗಿರುವುದರಿಂದ ಸದರಿ ಶಾಸನಬದ್ಧ ತೆರಿಗೆಯನ್ನು ಜಮಾ ಮಾಡಿರುವ ವಿಷಯವನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಬಳಿ ವಿಚಾರಿಸಿದರೇ ಅವರು ತಾವು ಜಮಾ ಮಾಡಿರುವುದಾಗಿ ತಮಗೆ ತಿಳಿಸಿರುತ್ತಾರೆ. ಆದಕಾರಣ ಈ ಮೇಲಿನ ಆರೋಪಕ್ಕೆ ಸಂಬಂಧಿಸಿದಂತೆ ಯಾವುದೇ ಆರ್ಥಿಕ ದುರ್ನಡತೆ ಮತ್ತು ಕರ್ತವ್ಯ ಲೋಪ ಎಸಗಿರುವುದಿಲ್ಲ.

9) ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006ರ ನಿಯಮ 46ರಲ್ಲಿ ವೋಚರ್‌ಗಳನ್ನು ತಯಾರಿಸುವ ವಿಧಾನವನ್ನು ತಿಳಿಸಲಾಗಿರುತ್ತದೆ. ಹಾಗೆಯೇ 47 ಮತ್ತು 48ರ ನಿಯಮಗಳಲ್ಲಿ ಪಾವತಿಯಾಗಬಹುದಾದ ಎಲ್ಲಾ ವೋಚರ್‌ಗಳು ಲೆಕ್ಕಪತ್ರಗಳ ನಿಯಮಾನುಸಾರ ನೈಜತೆಯಿಂದ ಕೂಡಿವೆ ಎಂದು ಪಿ.ಡಿ.ಓ. ರವರು ಪರಿಶೀಲಿಸಿ ದೃಢೀಕರಿಸಿದ ನಂತರ ಅಧ್ಯಕ್ಷರ ಸಹಿಗೆ ಮಂಡಿಸಬೇಕೆಂದು ತಿಳಿಸಲಾಗಿರುತ್ತದೆ. ಆದ್ದರಿಂದ ಲೆಕ್ಕಪತ್ರಗಳು ಮತ್ತು ವೋಚರ್‌ಗಳ ನಿರ್ವಹಣೆಯು ಪಿ.ಡಿ.ಓ. ಕರ್ತವ್ಯವಾಗಿರುವುದರಿಂದ ತಾವು ಯಾವುದೇ ಕರ್ತವ್ಯ ಲೋಪ ಎಸಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

ತಮ್ಮ ಮೇಲಿನ ಎಲ್ಲಾ ಆರೋಪಗಳಿಗೆ ಸಂಬಂಧಿಸಿದಂತೆ ತಾವು ನೀಡಿರುವ ಸಮಜಾಯಿಷಿಯನ್ನು ಪರಿಶೀಲಿಸಿ, ತಾವು ಅಧ್ಯಕ್ಷರಾಗಿ ಪದಗ್ರಹಣ ಹೊಂದುವುದಕ್ಕೆ ಮೊದಲೇ ಮಾಡಿದ ಕಾಮಗಾರಿಗಳು, ಸಾಮಗ್ರಿಗಳ ಖರೀದಿ ಹಾಗೂ ದುರಸ್ತಿ ಬಗ್ಗೆ ಮತ್ತು ಸಿಬ್ಬಂದಿಗಳ ನೇಮಕಾತಿ ಬಗ್ಗೆ ಹಿಂದಿನ ಅಧ್ಯಕ್ಷರು, ಪಿ.ಡಿ.ಓ. ಹಾಗೂ ಕಾರ್ಯದರ್ಶಿಯವರು ಹೊಣೆಗಾರರೆಂದು, ತಾವು ಯಾವುದೇ ರೀತಿಯ ಹಣ ದುರ್ಬಳಕೆ ಮತ್ತು ಕರ್ತವ್ಯ ಲೋಪ ಎಸಗದೇ ಇರುವುದರಿಂದ ನ್ಯಾಯ ಒದಗಿಸಿಕೊಡಬೇಕೆಂದು ಕೋರಿರುತ್ತಾರೆ.

ವಿಚಾರಣಾ ಅಧಿಕಾರಿಗಳ ಅಂಶಗಳು:-

- ಶ್ರೀಮತಿ ಡಿ.ಕೊಟ್ರಮ್ಮ, ಅಧ್ಯಕ್ಷರು, ಹ್ಯಾಳ್ಯಾ ಗ್ರಾಮ ಪಂಚಾಯಿತಿ, ಇವರು ಗ್ರಾಮ ಪಂಚಾಯಿತಿಯಲ್ಲಿ ನೌಕರರನ್ನು ನೇಮಕಾತಿ ಮಾಡಿ ಸದರಿ ಸಿಬ್ಬಂದಿಗಳಿಗೆ ರೂ.8,76,800/-ಗಳನ್ನು ನಿಯಮಬಾಹಿರವಾಗಿ ಪಾವತಿಸಿರುವುದು ಮತ್ತು ನೇಮಕಾತಿ ಕುರಿತು ಯಾವುದೇ ದಾಖಲೆ ಸಲ್ಲಿಸಿರುವುದಿಲ್ಲವಾದ್ದರಿಂದ ಈ ಆರೋಪವು ಭಾಗಶಃ ಸಾಬೀತಾಗಿರುತ್ತದೆ.
- ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯದೇ ಗ್ರಾಮ ಪಂಚಾಯಿತಿಯಿಂದ ಮಾತ್ರ ಅನುಮೋದಿಸಿಕೊಂಡು ರೂ.2,02,157/-ಗಳ ಕಾಮಗಾರಿಗಳನ್ನು ನಿರ್ವಹಿಸಿದ್ದಾರೆ, 13ನೇ ಹಣಕಾಸು ಯೋಜನೆಯಡಿ ಮಾಡಿರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಒಟ್ಟು ರೂ.1,06,000/-ಗಳನ್ನು ಸದರಿ ಅಧ್ಯಕ್ಷರ ಅಧಿಕಾರಾವಧಿಯಲ್ಲಿ ಪಾವತಿಸಿರುವುದು ಕಂಡುಬರುತ್ತದೆ.
- ಸದಸ್ಯರ ಸಭಾಭತ್ಯೆಗೆ ಸಂಬಂಧಿಸಿದಂತೆ ಸದಸ್ಯರ ಖಾತೆಗೆ ಅಕೌಂಟ್ ಪೇಯೀ ಚೆಕ್ ಮೂಲಕ ಪಾವತಿಸದೇ ರೂ.30,460/-ಗಳನ್ನು ಗ್ರಾಮ ಪಂಚಾಯಿತಿ ಸಿಬ್ಬಂದಿ ಹೆಸರಿಗೆ ಪಾವತಿಸಿರುವುದು ಕಂಡುಬರುತ್ತದೆ.
- ಸದರಿ ಅಧ್ಯಕ್ಷರ ಅಧಿಕಾರಾವಧಿಯಲ್ಲಿ ಸಾಮಾಗ್ರಿಗಳ ಸರಬರಾಜು ಮಾಡಿದವರ ಹೆಸರಿಗೆ ಪಾವತಿಸಿದೇ ಅನ್ಯರ ಹೆಸರಿಗೆ ರೂ.90,500/-ಗಳನ್ನು ಪಾವತಿಸಿರುವುದರ ಬಗ್ಗೆ ಯಾವುದೇ ದಾಖಲೆಗಳನ್ನು ಸಲ್ಲಿಸದೇ ಇರುವುದರಿಂದ ಇವರ ಹೇಳಿಕೆಯನ್ನು ಒಪ್ಪಲು ಬರುವುದಿಲ್ಲ.
- ಚಂದಾ ಮತ್ತು ಜಾಹೀರಾತು ವೆಚ್ಚ ರೂ.15,500/-ಗಳಿಗೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರದ ಮಂಜೂರಾತಿ ಹಾಗೂ ವಾರ್ತಾ ಮತ್ತ ಪ್ರಚಾರ ಇಲಾಖೆಯ ದೃಢೀಕರಣವಿಲ್ಲದೇ ಪಾವತಿಸಿರುವುದರಿಂದ ಇವರ ಹೇಳಿಕೆಯನ್ನು ಒಪ್ಪಲು ಸಾಧ್ಯವಿಲ್ಲ.
- ವೋಚರ್‌ಗಳನ್ನು ನಿರ್ವಹಿಸದೇ ರೂ.7,03,998/-ಗಳನ್ನು ಪಾವತಿಸಿರುವ ಆರೋಪಕ್ಕೆ ಅಧ್ಯಕ್ಷರ ಹೇಳಿಕೆಯನ್ನು ಮತ್ತು ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಬಳ್ಳಾರಿ ಇವರು ಸಲ್ಲಿಸಿದ ಹೇಳಿಕೆಯ ಪ್ರಕಾರ ವೋಚರ್‌ಗಳನ್ನು ತನಿಖಾ ತಂಡಕ್ಕೆ ಹಾಜರುಪಡಿಸುವುದು ಗ್ರಾಮ ಪಂಚಾಯಿತಿಯ ಪಿ.ಡಿ.ಓ. ರವರ ಕರ್ತವ್ಯವಾಗಿರುವುದರಿಂದ ಅಧ್ಯಕ್ಷರ ಹೇಳಿಕೆಯನ್ನು ಒಪ್ಪಿಕೊಂಡು ಈ ಆರೋಪವನ್ನು ಕೈಬಿಡಬಹುದಾಗಿದೆ.
- 14ನೇ ಹಣಕಾಸು ಯೋಜನೆ ಅಡಿ ಕೆ.ಟಿ.ಪಿ.ಪಿ. ಕಾಯ್ದೆಯನ್ನು ಉಲ್ಲಂಘಿಸಿ ಹಣ ಖರ್ಚು ಮಡಿ ನಿಯಮಗಳನ್ನು ಉಲ್ಲಂಘಿಸಿ ಕರ್ತವ್ಯ ನಿರ್ವಹಣೆಯಲ್ಲಿ ಲೋಪ ಎಸಗಿರುತ್ತಾರೆ.
- ಶಾಸನಬದ್ಧ ತೆರಿಗೆಗಳ ಮೊತ್ತ ರೂ.85,928/-ಗಳಿಗೆ ಸಂಬಂಧಿಸಿದ ಪಿ.ಡಿ.ಓ. ಇವರ ಜವಾಬ್ದಾರಿಯಾಗಿದ್ದರಿಂದ ಈ ಆರೋಪವನ್ನು ಕೈಬಿಡಬಹುದಾಗಿದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 48(4) ರನ್ವಯ "ಗ್ರಾಮ ಪಂಚಾಯಿತಿಯ ಪ್ರತಿಯೊಬ್ಬ ಅಧ್ಯಕ್ಷನನ್ನು ಮತ್ತು ಉಪಾಧ್ಯಕ್ಷನನ್ನು, ಅಧ್ಯಕ್ಷನಾಗಿ ಅಥವಾ ಉಪಾಧ್ಯಕ್ಷನಾಗಿ ಅವನ ಕರ್ತವ್ಯಗಳ ನಿರ್ವಹಣೆಯಲ್ಲಿ ನಿರಂತರ ಅಲಕ್ಷತೆ ತೋರುತ್ತಿರುವುದಕ್ಕಾಗಿ ಅಥವಾ ದುರ್ನಡತೆಯ ತಪ್ಪಿತಸ್ಥನಾಗಿರುವುದಕ್ಕಾಗಿ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಹುದ್ದೆಯಿಂದ, ಅವನಿಗೆ ಅಹವಾಲು ಹೇಳಿಕೊಳ್ಳಲು ಒಂದು ಅವಕಾಶವನ್ನು ಕೊಟ್ಟ ತರುವಾಯ ಮತ್ತು ಅವಶ್ಯಕವಾದಲ್ಲಿ ತಾಲ್ಲೂಕು ಪಂಚಾಯಿತಿಯಿಂದ ವರದಿಯೊಂದನ್ನು ಪಡೆದುಕೊಂಡು ಅದನ್ನು ಪರಿಶೀಲಿಸಿದ ತರುವಾಯ ಸರ್ಕಾರವು ಆ ಹುದ್ದೆಯಿಂದ, ತೆಗೆದುಹಾಕಬಹುದಾಗಿರತಕ್ಕದ್ದು ಮತ್ತು ಹಾಗೆ ತೆಗೆದುಹಾಕಲಾದ ಅಧ್ಯಕ್ಷನು ಅಥವಾ ಉಪಾಧ್ಯಕ್ಷನು (2)ನೇ ಉಪ-ಪ್ರಕರಣದ ಅಡಿಯಲ್ಲಿ ಸದಸ್ಯನಾಗಿರುವುದು ನಿಂತುಹೋಗಿರದಿದ್ದಲ್ಲಿ ಅವನು ಅಂತಹ ಗ್ರಾಮ ಪಂಚಾಯಿತಿಯ ಸದಸ್ಯ ಹುದ್ದೆಯ ಉಳಿದ ಅವಧಿಯಲ್ಲಿ ಅಧ್ಯಕ್ಷನಾಗಿ ಅಥವಾ ಉಪಾಧ್ಯಕ್ಷನಾಗಿ ಮರುಚುನಾವಣೆಗೆ ಅರ್ಹನಾಗಿರತಕ್ಕದ್ದಲ್ಲ" ಎಂದು ತಿಳಿಸಿದೆ.

ಲಭ್ಯವಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಶ್ರೀಮತಿ ಡಿ.ಕೊಟ್ರಮ್ಮ, ಅಧ್ಯಕ್ಷರು, ಹ್ಯಾಳ್ಯಾ ಗ್ರಾಮ ಪಂಚಾಯಿತಿ, ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರ ವಿರುದ್ಧ ಮಾಡಲಾದ ಆರೋಪಗಳ ಪೈಕಿ ಎರಡು ಆರೋಪಗಳಿಂದ ಕೈಬಿಡಬಹುದಾಗಿದೆ ಎಂದು ವಿಚಾರಣಾ ವರದಿಯಲ್ಲಿ ಉಲ್ಲೇಖಿಸಿ ಇನ್ನುಳಿದ ಆರೋಪಗಳು ಸಾಬೀತಾಗಿರುವುದಾಗಿ ವಿಚಾರಣಾ ವರದಿಯಲ್ಲಿ ಶಿಫಾರಸ್ಸು ಮಾಡಿರುವುದರಿಂದ ಸದರಿ ಅಧ್ಯಕ್ಷರು ಕರ್ತವ್ಯ ನಿರ್ವಹಣೆಯಲ್ಲಿ ಲೋಪ ಎಸಗಿರುವುದು ಹಾಗೂ ಆರ್ಥಿಕ ದುರ್ನಡತೆ ಇತ್ಯಾದಿ ಆರೋಪಗಳು ಸಾಬೀತಾಗಿರುವುದರಿಂದ **ದುರುಪಯೋಗಪಡಿಸಿಕೊಂಡಿರುವ ಹಣದ ಮೊತ್ತದಲ್ಲಿ ಅಧ್ಯಕ್ಷರಿಂದ ಶೇ.50ರಷ್ಟನ್ನು ಉಳಿದ ಶೇ.50ರಷ್ಟನ್ನು ಆ ಸಮಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಿಂದ ವಸೂಲು ಮಾಡಲು ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಭೂಕಂದಾಯ ಬಾಕಿ ಎಂದು ವಸೂಲಿ ಮಾಡಲು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ ಕೂಡ್ಲಿಗಿ, ಬಳ್ಳಾರಿ ಜಿಲ್ಲೆ ರವರಿಗೆ ಆದೇಶಿಸಿದೆ, ಮುಂದುವರೆದು** ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ 1993 ರ ಪ್ರಕರಣ 43(ಎ) ಮತ್ತು 48(4) ರನ್ವಯ ಶ್ರೀಮತಿ ಡಿ.ಕೊಟ್ರಮ್ಮ, ಅಧ್ಯಕ್ಷರು, ಹ್ಯಾಳ್ಯಾ ಗ್ರಾಮ ಪಂಚಾಯಿತಿ, ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ ರವರನ್ನು ಅಧ್ಯಕ್ಷ ಸ್ಥಾನ ಮತ್ತು ಸದಸ್ಯ ಸ್ಥಾನದಿಂದ ತೆಗೆದು ಹಾಕಲು ಸರ್ಕಾರವು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/658/ಗ್ರಾಪಂಅ/2019**
**ಬೆಂಗಳೂರು, ದಿನಾಂಕ:12-12-2019.**

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಲಭ್ಯವಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಆಪಾದಿತ ಅಧ್ಯಕ್ಷರಾದ ಶ್ರೀಮತಿ ಡಿ.ಕೊಟ್ರಮ್ಮ, ಅಧ್ಯಕ್ಷರು, ಹ್ಯಾಳ್ಯಾ ಗ್ರಾಮ ಪಂಚಾಯಿತಿ, ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರು ಅಧ್ಯಕ್ಷರಾದ ಅವಧಿಯಲ್ಲಿ ವಿವಿಧ ಯೋಜನೆಯಡಿ ಹಣ ದುರ್ಬಳಕೆ ಮತ್ತು ಕರ್ತವ್ಯಲೋಪ ಎಸಗಿರುವುದು ವಿಚಾರಣಾಧಿಕಾರಿಗಳ ತನಿಖೆಯಿಂದ ಸಾಬೀತಾಗಿರುವುದರಿಂದ **ದುರುಪಯೋಗಪಡಿಸಿಕೊಂಡಿರುವ ಹಣದ ಮೊತ್ತದಲ್ಲಿ ಅಧ್ಯಕ್ಷರಿಂದ ಶೇ.50ರಷ್ಟನ್ನು ಉಳಿದ ಶೇ.50ರಷ್ಟನ್ನು ಆ ಸಮಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಿಂದ ವಸೂಲು ಮಾಡಲು ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಭೂಕಂದಾಯ ಬಾಕಿ ಎಂದು ವಸೂಲಿ ಮಾಡಲು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ ಕೂಡ್ಲಿಗಿ, ಬಳ್ಳಾರಿ ಜಿಲ್ಲೆ ರವರಿಗೆ ಆದೇಶಿಸಿದೆ, ಮುಂದುವರೆದು** ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ಮತ್ತು 48(4) ರನ್ವಯ ಶ್ರೀಮತಿ ಡಿ.ಕೊಟ್ರಮ್ಮ, ಅಧ್ಯಕ್ಷರು, ಹ್ಯಾಳ್ಯಾ ಗ್ರಾಮ ಪಂಚಾಯಿತಿ, ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ ರವರನ್ನು ಹ್ಯಾಳ್ಯಾ ಗ್ರಾಮ ಪಂಚಾಯಿತಿಯ ಅಧ್ಯಕ್ಷ ಮತ್ತು ಸದಸ್ಯ ಸ್ಥಾನದಿಂದ ತೆಗೆದು ಹಾಕಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ರಮೇಶ್ ಡಿ.ಬಿ)**
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ:**

1. ಕಾರ್ಯದರ್ಶಿ, ರಾಜ್ಯ ಚುನಾವಣಾ ಆಯೋಗ, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ಬಳ್ಳಾರಿ ಜಿಲ್ಲೆ.
3. ಕಾರ್ಯನಿರ್ವಾಹಕ ಅಧಿಕಾರಿ, ಕೂಡ್ಲಿಗಿ ತಾಲ್ಲೂಕು ಪಂಚಾಯಿತಿ, ಬಳ್ಳಾರಿ ಜಿಲ್ಲೆ.
4. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹ್ಯಾಳ್ಯಾ ಗ್ರಾಮ ಪಂಚಾಯಿತಿ, ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.
5. ಶ್ರೀಮತಿ ಡಿ.ಕೊಟ್ರಮ್ಮ, ಹ್ಯಾಳ್ಯಾ ಗ್ರಾಮ ಪಂಚಾಯಿತಿ, ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.
6. ಗಣಕ ಕೋಶ-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
7. ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ.

<u>ಪ್ರತಿಯನ್ನು ಮಾಹಿತಿಗಾಗಿ:</u>

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ನಿರ್ದೇಶಕರು(ಪಂ.ರಾಜ್-I) ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು.

****